**ಸಾಕ್ಷಿಗೆ ದಿನಾಂಕ 18.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀಮತಿ ಎಸ್ ಎಲ್  ವಕೀಲರಿಂದಃ

1. ನಾನು ಈ ಪ್ರಕರಣದಲ್ಲಿ, ಅರ್ಜಿದಾರಳಾಗಿರುತ್ತೇನೆ.  ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ.  ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ.  ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ  ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ  ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 1 | ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ |
| ನಿ.ಪಿ 2 | ಪ್ರಥಮ ಹೇಳಿಕೆಯ ದೃಢೀಕೃತ ಪ್ರತಿ |
| ನಿ.ಪಿ 3 | ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿ |
| ನಿ.ಪಿ 4 | ಸ್ವತ್ತಿನ ಪಟ್ಟಿಯ ದೃಢೀಕೃತ ಪ್ರತಿ |
| ನಿ.ಪಿ 5 | ಎಂ ವಿ ಐ ವರದಿಯ ದೃಢೀಕೃತ ಪ್ರತಿ |
| ನಿ.ಪಿ 6 | ಕಲಂ 133 ರಡಿ ನೀಡಿದ ನೋಟೀಸು ದೃಢೀಕೃತ ಪ್ರತಿ |
| ನಿ.ಪಿ 7 | ಕಲಂ 133 ರಡಿ ನೀಡಿದ ನೋಟೀಸಿಗೆ ಉತ್ತರ ದೃಢೀಕೃತ ಪ್ರತಿ |
| ನಿ.ಪಿ 8 | ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿ |
| ನಿ.ಪಿ 9 | ದೋಷಾರೋಪಣ ಪತ್ರದ ದೃಢೀಕೃತ ಪ್ರತಿ |
| ನಿ.ಪಿ 10 | ಡಿಸ್ಚಾರ್ಜ್ ಸಮರಿ |
| ನಿ.ಪಿ 11 | ಆಧಾರ್ ಕಾರ್ಡ್‌ನ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ |

| | |
|---|---|
| | ಹಿಂದಿರುಗಿಸಲಾಯಿತು.). |
| ನಿ.ಪಿ 12 | 14 ಮೆಡಿಕಲ್ ಬಿಲ್ಲುಗಳು ಮೊತ್ತ ರೂ.5,14,811/- (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ರಿಂದ 14 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 13 | 24 ಔಷಧಿ ಚೀಟಿಗಳು (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ರಿಂದ 24 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 14 | ಮುಂಗಡ ಹಣ ಪಾವತಿ ರಶೀದಿಗಳು |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀಸವಾಲುಃ 2 ನೇ ಎದುರುದಾರರು ಗೈರುಹಾಜರು. ಈ ಕಾರಣದಿಂದ ಪಾಟೀಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**